
ಆ ಬೆಟ್ಟದಲ್ಲೊಂದು ದೊಡ್ಡದಾದ ಹುಲಿಯ ಗುಹೆಯಿತ್ತು. ಅದರಲ್ಲಿ ಎರಡು ಹುಲಿಗಳು ವಾಸವಾಗಿದ್ದವು. ಅವೆರಡೂ ದಂಪತಿ ಹುಲಿಗಳಾಗಿದ್ದವು. ಆ ಎರಡು ಹುಲಿಗಳು ಎಳೆಯದಾದ ಕರು ಗಂಗೆಯನ್ನು ನೋಡಿದವು. ಕರುವನ್ನು ನೋಡಿದ ಹೆಣ್ಣು ಹುಲಿಯು 'ಆ ಎಳೆ ಕರುವು ತಿನ್ನಲು ತುಂಬಾ ರುಚಿಯಾಗಿರುತ್ತದೆ. ಅದನ್ನು ತಂದು ಕೊಡಿ' ಎಂದು ಗಂಡು ಹುಲಿಯಲ್ಲಿ ಬೇಡಿಕೆಯಿಟ್ಟಿತು.

ಹೆಣ್ಣು ಹುಲಿಯ ಕೋರಿಕೆಯಂತೆ ಗಂಡು ಹುಲಿಯು ಕೂಡಲೆ ಎಳೆಕರುವನ್ನು ಬಾಯಿಯಲ್ಲಿ ಕಚ್ಚಿಕೊಂಡು ತನ್ನ ಗುಹೆಗೆ ತಂದಿತು. ಆಗ ಅಲ್ಲಿರುವ ಹಸು ಮತ್ತು ಎಮ್ಮೆಗಳು ಅದನ್ನು ನೋಡಿ ಗುಹೆಯ ಹತ್ತಿರ ಓಡಿಹೋದವು. ಗೌರಿಗೆ ತನ್ನ ಕಂದನ ಪರಿಸ್ಥಿತಿಯನ್ನು ನೋಡಿ ಅಳುವೇ ಬಂದಿತು.

ಹುಲಿಗಳು ಗಂಗೆ ಕರುವನ್ನು ಕಚ್ಚಿಕೊಂಡು ಗುಹೆಯ ಒಳಗೆ ಹೋದವು. ಅಷ್ಟರಲ್ಲಿ ಗುಹೆಯ ಒಳಗಿದ್ದ ಹುಲಿಯ ಮರಿಗಳು ತಮ್ಮ ತಂದೆತಾಯಿಯ ಕಣ್ಣು ತಪ್ಪಿಸಿ ಗುಹೆಯಿಂದ ಹೊರಗೆ ಬಂದವು. ಅವು ಗೌರಿಯ ಬಳಿಗೆ ಬಂದು ಅವಳ ಕೆಚ್ಚಲಿನಲ್ಲಿದ್ದ ಹಾಲನ್ನು ಕುಡಿಯಲು ಪ್ರಾರಂಭಿಸಿದವು. ಹುಲಿಗಳು ತಮ್ಮ ಪ್ರೀತಿಯ ಕಂದಮ್ಮಗಳು ಕಾಣದಿದ್ದಾಗ ಅವುಗಳನ್ನು ಹುಡುಕುತ್ತಾ ಗುಹೆಯ ಹೊರಗೆ ಬಂದವು. ತಮ್ಮ ಮರಿಗಳನ್ನು ಕಂಡು ಒಮ್ಮೆಲೆ ಆಶ್ಚರ್ಯಪಟ್ಟವು. ಹೆಣ್ಣು ಹುಲಿಗಂತೂ ಅಲ್ಲಿನ ಸನ್ನಿವೇಶವನ್ನು ಕಂಡು ತುಂಬಾ ವೇದನೆಯಾಯಿತು.

'ಆಹಾ ಇದು ಎಂತಹ ಸನ್ನಿವೇಶ! ಈ ಹಸುವು ತನ್ನ ಕಂದನಿಗಾಗಿ ನಮ್ಮ ಗುಹೆಯ ಮುಂದೆ ಬಂದು ನಿಂತಿದೆ. ಅಲ್ಲದೆ, ನನ್ನ ಮರಿಗಳಿಗೆ ಯಾವ ಸ್ವಾರ್ಥ ಭಾವನೆಯೂ ಇಲ್ಲದೆ ಹಾಲನ್ನು ಉಣಿಸುತ್ತಿದೆ. ಆದರೆ ನಾನು ನನ್ನ ಮರಿಗಳು ಕಾಣೆಯಾಗಿರುವುದನ್ನು ಕಂಡು ಎಷ್ಟೊಂದು ಪರಿತಪಿಸಿದೆ. ಆ ಹಸುವಾದರೂ ನಾನು ಅದರ ಕರುವನ್ನು ತಿನ್ನಲು ಯೋಚಿಸಿದುದನ್ನು ತಿಳಿದು ಎಷ್ಟು ನೊಂದಿರಬೇಕು. ಇದಕ್ಕವಲ್ಲವೇ ಹೇಳುವುದು ತಾಯಿಯ ಪ್ರೇಮವೆಂದು. ತಾಯಿ ಮಕ್ಕಳ ಕರುಳ ಸಂಬಂಧವೆಂದರೆ ಇದಲ್ಲವೇ? ತಾಯಿಯ ಮಮತೆಯನ್ನು ಈ ಪ್ರಪಂಚದಲ್ಲಿ ಯಾರಿಂದಲೂ ವರ್ಣಿಸಲು ಅಸಾಧ್ಯ. ನನ್ನಂತೆಯೇ ಆ ಹಸುವಿಗೂ ಮಕ್ಕಳ ಮೇಲಿನ ಪ್ರೀತಿ, ಮಮತೆ ಮತ್ತು ಕರುಳಿನ ಸಂಬಂಧವಿದೆಯೆಂದ ಮೇಲೆ ನಾನು ಆ ಎಳೆ ಕರುವನ್ನು ತಿಂದರೆ ದೇವರು ಸಹ ನನ್ನನ್ನು ಮೆಚ್ಚಲಾರ' ಎಂದು ಹೆಣ್ಣು ಹುಲಿಯು ನೊಂದ ತಾಯಿಯ ಸಂಕಟವನ್ನು ಅರಿತು ತಾನು ತಿನ್ನಲು ಬಯಸಿದ ಕರುವನ್ನು ಅದರ ತಾಯಿಯೊಂದಿಗೆ ಕಳುಹಿಸಿಕೊಟ್ಟಿತು.



ಗಂಗೆ ಕರುವು ತನ್ನ ತಾಯಿ ಬಳಿಗೆ ಓಡಿ ಬಂದು ನಿಂತಿತು. ಹುಲಿ ಮರಿಗಳು ತಾಯಿಯೊಂದಿಗೆ ಗುಹೆಯ ಒಳಗೆ ಹೋದವು.

ಇತ್ತ ನಿದ್ದೆಯಿಂದ ಎದ್ದ ರಾಮು ಮೇಯುತ್ತಿದ್ದ ಹಸು ಮತ್ತು ಎಮ್ಮೆಗಳು ಕಾಣೆಯಾಗಿರುವುದನ್ನು ಕಂಡು ಗಾಬರಿಯಾಗಿದ್ದ. ಅವೆಲ್ಲವೂ ರಾಮುವಿನ ಬಳಿಗೆ ಬಂದು ನಿಂತಾಗ ಸಂತೋಷದಿಂದ ಮನೆಯ ಕಡೆಗೆ ಹೆಜ್ಜೆ ಹಾಕಿದ.

●